**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ವಿಷಯ:-** ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯ (ಮೈಸೂರು ಬ್ಯಾಂಕ್ ಬಳಿ) ಒಂದನೇ ತಿರುವಿನಲ್ಲಿ ಹಾಸ್ಪಿಟಲ್ ರಸ್ತೆಗೆ ಹೋಗುವ ದಾರಿಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಕಾನೂನು ಬಾಹಿರವಾಗಿ ವಾಹನ ನಿಲುಗಡೆ ಮಾಡಲಾಗುತ್ತಿದೆ. ಇಲ್ಲಿನ ಖಾಸಗಿ ಬ್ಯಾಂಕಿನ ಹಣ ತುಂಬುವ (ಚೆಸ್ಟ್) ಕಾರ್ಯಾಲಯದ ಕಟ್ಟಡದಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಶೆಡ್ ನಿರ್ಮಾಣ ಮಾಡಿರುತ್ತಾರೆ. ಈ ಕಟ್ಟಡಕ್ಕೆ ಹೊಂದಿಕೊಂಡಿರುವಂತೆ ಪಾದಚಾರಿ ಮಾರ್ಗದಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಾರೆ. ಈ ಕಟ್ಟಡಕ್ಕೆ ಹೊಂದಿಕೊಂಡಿರುವಂತೆ ಇನ್ನೊಂದು ಕಾಮಗಾರಿ ನಡೆಯುತ್ತಿದ್ದು, ಅಲ್ಲೂ ಸಹ ಕಟ್ಟಡ ಸಾಮಗ್ರಿಗಳನ್ನು ಪಾದಚಾರಿ ರಸ್ತೆಯಲ್ಲಿ ಹಾಕಿ ಜನರ ಓಡಾಟಕ್ಕೆ ಅಡಚಣೆ ಮಾಡುತ್ತಿದ್ದಾರೆ. ಒಂದನೇ ತಿರುವಿನಲ್ಲಿ ಇರುವ RC ವೈನ್ ಸೆಂಟರ್ ಮತ್ತು ಕೆಂಪ್ ಪಬ್ ಬಾರ್ ಅಂಡ್ ರೆಸ್ಟೋರೆಂಟ್ ಗೆ ಬರುವಂತಹ ಗ್ರಾಹಕರು ರಸ್ತೆಯಲ್ಲೇ ಎರಡು ಬದಿಗಳಲ್ಲಿ ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಿ ಪಾದಚಾರಿಗಳಿಗೆ ಅಡಚಣೆ ಮಾಡುತ್ತಿದ್ದಾರೆ. ಐಸಿಐಸಿಐ ಬ್ಯಾಂಕ್ ಪಕ್ಕದಲ್ಲಿರುವ ಇನ್ನೊಂದು ಸರಕು ಸಾಗಣೆ ಕಛೇರಿಯಲ್ಲಿ ಸರಕು ವಾಹನಗಳನ್ನು ಮತ್ತು ಲಾರಿಯನ್ನು ನಿಲ್ಲಿಸಿಕೊಂಡು ಅಲ್ಲೂ ಸಹ ವಾಹನಗಳು, ಪಾದಚಾರಿಗಳು ಮುಕ್ತವಾಗಿ ಸಂಚರಿಸದಂತೆ ರಸ್ತೆಗೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆ. ಪಾದಚಾರಿಗಳು ಸಾರ್ವಜನಿಕರು ವಾಹನಗಳು ಚಲಿಸಲು ಅಡ್ಡಿ ಉಂಟು ಮಾಡುವುದರ ಮೂಲಕ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಸಂಚಾರಿ ಪೊಲೀಸರು ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕ ವಲಯದಲ್ಲಿ ಟೀಕೆಗೆ ಒಳಗಾಗಿರುತ್ತದೆ. ಜೊತೆಗೆ ಎರಡೂ ಬದಿಯಲ್ಲಿ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಆದುದರಿಂದ ಸಂಚಾರಿ ಪೊಲೀಸರ ಮುಖಾಂತರ ರಸ್ತೆ ಬದಿಯ ಒತ್ತುವರಿಯನ್ನು ತೆರವುಗೊಳಿಸಿ ಮುಕ್ತ ಸಂಚಾರಕ್ಕೆ ಮತ್ತು ಪಾದಚಾರಿಗಳು ಮುಕ್ತವಾಗಿ ಓಡಾಡಲು ಅನುವು ಮಾಡಿಕೊಡಲು ಕೈಗೊಂಡಿರುವ ಕ್ರಮಗಳ ಕುರಿತು.

**ಉತ್ತರ:-**

- ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯ (ಮೈಸೂರು ಬ್ಯಾಂಕ್ ಬಳಿ) ಹತ್ತಿರದಲ್ಲಿಯೇ ಬಹುತೇಕ ಬ್ಯಾಂಕ್ ಮತ್ತು ಬ್ಯಾಂಕ್‌ಗಳ ಮುಖ್ಯ ಕಚೇರಿ, ಕೆಲವು ಸರ್ಕಾರಿ ಕಚೇರಿಗಳು, ವಾಣಿಜ್ಯ ಕೇಂದ್ರಗಳು, ವಕೀಲರುಗಳ ಕಚೇರಿಗಳು ಮತ್ತು ಮಾರ್ಕೆಟ್ ಇರುವುದರಿಂದ, ಹೆಚ್ಚು ವಾಹನಗಳು ಬಂದು ಹೋಗುವ ಮತ್ತು ಜನ ಸಂದಣಿ ಇರುವ ರಸ್ತೆಯಾಗಿರುತ್ತದೆ.
- ಪಾದಚಾರಿ ಮಾರ್ಗದಲ್ಲಿ ಒತ್ತುವರಿಯಾಗದಂತೆ ಈಗಾಗಲೇ ನೋಟಿಸ್ ಜಾರಿ ಮಾಡಿ, ಸಾಮಾಗ್ರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
- ಪಾದಚಾರಿ ಮಾರ್ಗ ಒತ್ತುವರಿ ಮಾಡಿ, ಶೆಡ್ ನಿರ್ಮಾಣ ಮಾಡಿಕೊಂಡಿರುವ ಸಂಬಂಧ, ಒತ್ತುವರಿ ತೆರವುಗೊಳಿಸುವಂತೆ ಕೋರಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಗಾಂಧಿನಗರ ವಾರ್ಡ್‌ನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಸಂವಹಿಸಲಾಗಿದೆ.
- ಈ ಸ್ಥಳದಲ್ಲಿ ಅನಧಿಕೃತವಾಗಿ ಪಾರ್ಕಿಂಗ್ ಮಾಡುವ ವಾಹನ ಚಾಲಕರುಗಳ ವಿರುದ್ಧ ಐ.ಎಂ.ವಿ. ಹಾಗೂ ಬಿ.ಎನ್.ಎಸ್. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.
- 2026 ನೇ ಸಾಲಿನಲ್ಲಿ ಪ್ರಸ್ತುತ ಇಲ್ಲಿಯವರೆಗೆ ದಾಖಲಿಸಿದ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ:-

| | |
|---|---|
| ಐಎಂವಿ ಕಾಯ್ದೆಯಲ್ಲಿ ದಾಖಲಿಸಿದ ಪ್ರಕರಣಗಳ ಸಂಖ್ಯೆ | 159 |
| ಸಂಗ್ರಹಿಸಲಾದ ದಂಡದ ಮೊತ್ತ | ರೂ. 96,400/- |
| ಬಿ.ಎನ್.ಎಸ್. ಕಾಯ್ದೆ ಕಲಂ 285 ರೀತ್ಯಾ ದಾಖಲಿಸಿದ ಪ್ರಕರಣಗಳ ಸಂಖ್ಯೆ | 08 |

- ಪ್ರಸ್ತುತ ಸದರಿ ಸ್ಥಳದಲ್ಲಿ ಸುಗಮ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ಪ್ರತಿ ನಿತ್ಯ ಒಬ್ಬರು ಎಎಸ್ಐ ರವರ ನೇತೃತ್ವದಲ್ಲಿ ಸಿಬ್ಬಂದಿಗಳನ್ನು ನೇಮಿಸುತ್ತಿದ್ದು, ಯಾವುದೇ ಅನಧಿಕೃತ ಪಾರ್ಕಿಂಗ್ ಆಗದಂತೆ ನಿಯಂತ್ರಣ ಮಾಡುವ ಮೂಲಕ ವಾಹನಗಳ ಮುಕ್ತ ಸಂಚಾರ ಮತ್ತು ಪಾದಚಾರಿಗಳು ಮುಕ್ತವಾಗಿ ಓಡಾಡಲು ಅನುವು ಮಾಡಿಕೊಡಲಾಗಿದೆ.

ಹೆಚ್‌ಡಿ 166 ಎಸ್‌ಎಸ್‌ಟಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.

Scanned with OKEN Scanner